







ರೈಲಿನಲ್ಲಿ ಒಬ್ಬ ಭಾರತೀಯ ವ್ಯಾಪಾರಿ ಹಾಗೂ ಚೀನಾ ನಾಗರಿಕ ಪ್ರಯಾಣಿಸುತ್ತಿದ್ದರು.

ಸೊಳ್ಳೆಯೊಂದು ಬಂದದ್ದನ್ನು ಕಂಡ ಚೀನೀಯ ಗಬಕ್ಕನೆ ಹಿಡಿದು ತಿಂದ.

ಸ್ವಲ್ಪ ಹೊತ್ತಿನ ನಂತರ ಮತ್ತೊಂದು ಸೊಳ್ಳೆ ಹಾರುತ್ತಾ ಬಂತು. ಭಾರತೀಯ ಗಬಕ್ಕನೆ ಹಿಡಿದ. 'ಕೇವಲ 50ಪೈಸೆ, ಬೇಕಾ?' ಎಂದ!

ಸಂಜೆ ಮಳೆ ಸುರಿಯುತ್ತಿತ್ತು. ಅಂಗಡಿಯ ಎದುರು ಒಬ್ಬ 'ನಿಗೂಢ ಕಥೆ'ಯ ಪುಸ್ತಕ ಮಾರುತ್ತಾ ನಿಂತಿದ್ದ. 'ಭಯ ಹುಟ್ಟಿಸುವ ಕಥಾನಕ. ಕೊನೆಯ ಪುಟ ತೆರೆದರಂತೂ ಎದೆ ಒಡೆದು ಹೋಗುತ್ತದೆ. ತಗೊಳ್ಳಿ ಪುಸ್ತಕ..' ಎಂದಾತ ಕೂಗುತ್ತಿದ್ದ.

ದಾರಿಹೋಕ 'ಎಷ್ಟಪ್ಪಾ?' ಎಂದ. 'ಸಾವಿರ ರೂಪಾಯಿ ಸಾರ್' ಎಂದ ಮಾರಾಟಗಾರ. ದಾರಿಹೋಕ ಖರೀದಿಸಿದ. 'ಹುಷಾರು ಸಾರ್.. ಕೊನೇ ಪುಟ ಮಾತ್ರ ತೆರೆಯಬೇಡಿ' ಎಂದು ಮಾರಿದವ ಮತ್ತೆ ಎಚ್ಚರಿಸಿದ.

ಖರೀದಿಸಿದಾತ ಮನೆಗೆ ಹೋಗಿ ಕುತೂಹಲ ತಡೆಯಲಾಗದೆ ಮೊದಲು ಕೊನೇ ಪುಟ ತೆರೆದ. ಅಲ್ಲಿ 'ಬೆಲೆ 40 ರೂಪಾಯಿ' ಎಂದಿತ್ತು!



ಸ್ನೇಹಿತ- ಆತ್ಮೀಯ ಸ್ನೇಹಿತರ ನಡುವೆ ಏನು ವ್ಯತ್ಯಾಸ?

ಅಪಘಾತವಾಗಿ ಆಸ್ಪತ್ರೆಗೆ ಸೇರಿದಾಗ ಸ್ನೇಹಿತ ಬಂದರೆ, 'ಈಗ ಹೇಗಿದ್ದೀರಾ? ಏನಾಯ್ತು? ಸರಿ ಹೋಗುತ್ತೆ, ಬಿಡಿ' ಎಂದು ಮಾತಾಡುತ್ತಾನೆ.

ಅದೇ ಆತ್ಮೀಯ ಸ್ನೇಹಿತ ಬಂದರೆ, 'ಮಗಾ.. ನರ್ಸ್ ಹೆಂಗಿದ್ದಳೋ?' ಎಂದು ಕೇಳುತ್ತಾನೆ.

